# ಕನ್ನಡ ಮಹಿಳಾ ಕಥಾಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಗಳ ಸ್ವರೂಪ: ಆಯ್ದ ಕಥೆಗಾರ್ತಿಯರನ್ನು ಅನುಲಕ್ಷಿಸಿ

**ಎಂ. ಶೆಲ್ವಿ ಬಾಲಕೃಷ್ಣನ್**

ಸಹಾಯಕ ಪ್ರಾಧ್ಯಾಪಕರು (ಕನ್ನಡ ವಿಭಾಗ) ಕ್ರೈಸ್ಟ್ ಅಕಾಡೆಮಿ ಇನ್‌ಸ್ಟಿಟ್ಯೂಟ್ ಫಾರ್ ಅಡ್ವಾನ್ಸ್‌ಡ್ ಸ್ಟಡೀಸ್, ಕ್ರೈಸ್ಟ್ ನಗರ್, ಎಲೆಕ್ಟ್ರಾನಿಕ್ ಸಿಟಿ, ಬೆಂಗಳೂರು.

**DOI: https://doi.org/10.5281/zenodo.18787636**

## ABSTRACT:

ಕನ್ನಡ ಮಹಿಳಾ ಕಥಾಸಾಹಿತ್ಯವು ಹೆಣ್ಣಿನ ಅಂತರಂಗದ ತುಮುಲ, ಅವಳ ವಿಶಿಷ್ಟ ಅನುಭವಗಳು ಮತ್ತು ಅಸ್ಮಿತೆಯ ಹುಡುಕಾಟದ ಪ್ರಬಲ ಅಭಿವ್ಯಕ್ತಿಯಾಗಿದೆ. ಪಿತೃಪ್ರಧಾನ ವ್ಯವಸ್ಥೆಯ ಚೌಕಟ್ಟಿನಲ್ಲಿ ನೊಂದು ಬೆಂದ ಹೆಣ್ಣು, ಕಾಲಕ್ರಮೇಣ ಸಾಂಪ್ರದಾಯಿಕ ಮೌಲ್ಯಗಳನ್ನು ಪ್ರಶ್ನಿಸುವ ಮತ್ತು ಪ್ರತಿರೋಧ ಒಡ್ಡುವ ಹಂತಕ್ಕೆ ಬೆಳೆದ ಪರಿಯನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ವೈದೇಹಿ, ಸಾರಾ ಅಬೂಬಕರ್, ನೇಮಿಚಂದ್ರ ಮುಂತಾದ ಕಥೆಗಾರ್ತಿಯರು ಸ್ತ್ರೀ ಸಂವೇದನೆಯ ಮೂಲಕ ಕೌಟುಂಬಿಕ ಮತ್ತು ಸಾಮಾಜಿಕ ಶೋಷಣೆಗಳನ್ನು ತೆರೆದಿಡುತ್ತಾರೆ. ಲೈಂಗಿಕತೆ, ಸಮಾನತೆ ಮತ್ತು ವ್ಯಕ್ತಿತ್ವ ರೂಪಿಸಿಕೊಳ್ಳುವ ಸ್ವಾತಂತ್ರ್ಯದ ಕುರಿತಾದ ಸ್ತ್ರೀವಾದಿ ಚಿಂತನೆಗಳು ಆಧುನಿಕ ಕಥೆಗಳಲ್ಲಿ ಹೇಗೆ ಸಾಕಾರಗೊಂಡಿವೆ ಮತ್ತು ಮಹಿಳಾ ಪ್ರಜ್ಞೆಯು ಹೇಗೆ ವಿಕಾಸಗೊಂಡಿದೆ ಎಂಬುದರ ಮೇಲೆ ಇಲ್ಲಿ ಬೆಳಕು ಚೆಲ್ಲಲಾಗಿದೆ.

## KEYWORDS:

ಸ್ತ್ರೀ ಸಂವೇದನೆ, ಮಹಿಳಾ ಕಥಾಸಾಹಿತ್ಯ, ಪಿತೃಪ್ರಧಾನ ವ್ಯವಸ್ಥೆ, ಸ್ತ್ರೀವಾದಿ ಚಿಂತನೆ, ಅಸ್ಮಿತೆಯ ಹುಡುಕಾಟ.

ಒಂದು ಸಮಾಜದಲ್ಲಿ ಹೆಣ್ಣು ತನ್ನ ಬದುಕನ್ನು ರೂಪಿಸಿಕೊಳ್ಳಲು ಒಂದು ಚೌಕಟ್ಟು ಎಂಬುದು ಇರುತ್ತದೆ. ಸಮಾಜದಲ್ಲಿ ಹೆಣ್ಣು ತನ್ನ ಬದುಕನ್ನು ಸ್ವತಂತ್ರವಾಗಿ ಸಾಗಿಸುವ ಹಿನ್ನೆಲೆಯಲ್ಲಿ ಅಲ್ಲಿನ ವ್ಯವಸ್ಥೆಯನ್ನು ಕಟ್ಟುವ ಪ್ರಯತ್ನವನ್ನು ಮಾಡುತ್ತಾಳೆ. ಮಹಿಳಾ ಕಥೆಗಳಲ್ಲಿ ಕಥೆಗಾರ್ತಿಯರ ಕೇಂದ್ರಬಿಂದು ಹೆಣ್ಣು. ಈ ಹೆಣ್ಣು ವಿವಿಧ ಜಾತಿ, ವಯಸ್ಸು, ಅಂತಸ್ತುಗಳಲ್ಲಿ ಇರುವುದನ್ನು ಸ್ತ್ರೀ ಸಂವೇದನೆಗಳಲ್ಲಿ ಕಾಣಬಹುದು. ಮಹಿಳೆಯರು ಸಿದ್ಧಗೊಂಡ ಮಾದರಿಯಲ್ಲಿ ಸಾಹಿತ್ಯ ಕೃತಿಗಳಲ್ಲಿ ಅಭಿವ್ಯಕ್ತಗೊಂಡಿರುವುದನ್ನು ಕಾಣಬಹುದು. ಆದರೆ ಆಕೆ ವಾಸ್ತವದಲ್ಲಿ ವಿಭಿನ್ನ ರೀತಿಯಾದ ಸಂದಿಗ್ಧ ಸನ್ನಿವೇಶ ಎದುರಿಸುವುದನ್ನು ಗಮನಿಸಬೇಕಿದೆ.

ಮಹಿಳೆಯರಿಂದಲೇ ರಚಿಸಲಾದುದು ಮಹಿಳಾ ಸಾಹಿತ್ಯ. ಆದರೆ ಇದರಿಂದ ಮಹಿಳಾ ಸಾಹಿತ್ಯವನ್ನು, ಸ್ವರೂಪವನ್ನು ಸಂಪೂರ್ಣವಾಗಿ ಹಾಗೂ ಸ್ಪಷ್ಟವಾಗಿ ತಿಳಿಯಲಾಗುವುದಿಲ್ಲ. ಮಹಿಳೆಯರಿಂದ ಕೇವಲ ಮಹಿಳೆಯರನ್ನು ಮಾತ್ರ ಸಾಹಿತ್ಯದ ಕೇಂದ್ರಬಿಂದುವನ್ನಾಗಿ ಇರಿಸಿಕೊಂಡು ಮಹಿಳಾವಾದವನ್ನು ಪ್ರತಿಪಾದಿಸುವ ಸಾಹಿತ್ಯದ ರಚನೆಯಾಗಿದೆ. ಸಾಹಿತ್ಯ ಪ್ರಪಂಚದಲ್ಲಿ ಕಥನ ಸಾಹಿತ್ಯ ತನ್ನದೇ ಆದ ವಿಶಿಷ್ಟ ಸ್ಥಾನವನ್ನು ಹೊಂದಿದೆ. ಇದು ಬಹಳಷ್ಟು ಜನಪ್ರಿಯ ಮಾಧ್ಯಮವಾಗಿದೆ. ಆಧುನಿಕ ಕನ್ನಡ ಸಾಹಿತ್ಯದ ಪ್ರಮುಖ ಪ್ರಕಾರಗಳಲ್ಲಿ ಕಥಾಸಾಹಿತ್ಯವು ಒಂದಾಗಿದೆ. ಮಹಿಳಾ ಸಾಹಿತ್ಯವನ್ನು ಗಮನಿಸಿದಾಗ ಆಯಾ ಕಾಲಕ್ಕೆ ಅನುಗುಣವಾಗಿ ತಮ್ಮ ಅನುಭವಗಳನ್ನು, ಭಾವನೆಗಳನ್ನು ಅಭಿವ್ಯಕ್ತಪಡಿಸಿರುವುದು ಕಂಡುಬರುತ್ತದೆ. ಮಹಿಳೆಯರು ಬಹಳ ಪ್ರಮುಖವಾಗಿ ತಮ್ಮ ನೋವು-ದುಃಖ ದುಮ್ಮಾನಗಳನ್ನು ಹೇಳಿಕೊಳ್ಳುವ ಸಲುವಾಗಿ ಕಥನ ಸಾಹಿತ್ಯವನ್ನು ಮಾಧ್ಯಮವಾಗಿಸಿಕೊಂಡಿದ್ದಾರೆ. ಜಗತ್ತನ್ನು ನೋಡುವ ದೃಷ್ಟಿಯಲ್ಲಿ ಸ್ತ್ರೀ-ಪುರುಷರ ನಡುವೆ ಆಳವಾದ ಮೂಲಭೂತವಾದ ಅಂತರವಿದೆಯೆಂದೂ, ಈ ಅಂತರವೇ ಸ್ತ್ರೀ ಸಂವೇದನೆಯ ಮೂಲವೆಂದು ಹೇಳಿರುವ ಹಾಗೂ ಮಹಿಳೆಯರ ಅನುಭವಗಳನ್ನು, ಅವರದೇ ಆದ ಗ್ರಹಿಕೆಯ ಹಿನ್ನೆಲೆಯಲ್ಲಿ ವರ್ಣಿಸುವುದೇ ಸ್ತ್ರೀ ಸಂವೇದನೆ ಆಗಿರುತ್ತದೆ ಎಂಬುದನ್ನು ತಿಳಿಯಬಹುದಾಗಿದೆ.

ಸ್ವಾತಂತ್ರ್ಯ ಪೂರ್ವದಲ್ಲಿ ಮಹಿಳಾ ಸಾಹಿತ್ಯದ ರಚನೆಯನ್ನು ಗಮನಿಸಿದಾಗ ಬದುಕು ಮತ್ತು ಬರಹಗಳಿಗೆ ಸಂಬಂಧವಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಕನ್ನಡ ನಾಡಿನಲ್ಲಿ ಸ್ವಾತಂತ್ರ್ಯ ಚಳುವಳಿ, ಸುಧಾರಣಾ ಚಳುವಳಿಗಳು ತುಂಬ ಸಕ್ರಿಯವಾಗಿದ್ದ ಕಾಲವದು. ಕುಟುಂಬ, ವಿವಾಹ, ದಾಂಪತ್ಯ ಇವುಗಳ ಚೌಕಟ್ಟಿನೊಳಗೆ ಬಾಲ್ಯವಿವಾಹ, ಬಾಲ್ಯವೈಧವ್ಯ, ತಂದೆ ತಾಯಿಗಳ ಸಂಪ್ರದಾಯದ ಚೌಕಟ್ಟು, ತಾನು ಅನುಭವಿಸುತ್ತಿದ್ದ ಸಂಕಟ ಹಾಗೂ ಒಂಟಿತನವನ್ನು ತುಂಬಿಕೊಳ್ಳಲೆಂದೇ ಮಹಿಳೆಯರು ಸಾಹಿತ್ಯವನ್ನು ಅಭಿವ್ಯಕ್ತಿ ಮಾಧ್ಯಮವಾಗಿ ಬಳಸಿಕೊಂಡು, ಮನೆಯ ಸೀಮಿತವಾದ ಚೌಕಟ್ಟಿನಲ್ಲಿ ಕೌಟುಂಬಿಕ ಸಮಾರಂಭಗಳಿಗೆ ಅನುಗುಣವಾಗಿ ಎಲ್ಲಾ ಸಂದರ್ಭಗಳಲ್ಲೂ ಹೊಂದಾಣಿಕೆಗಳನ್ನು ಮಾಡಿಕೊಳ್ಳುವ ಮೂಲಕ ಪ್ರಧಾನ ಸಂಸ್ಕೃತಿಗೆ ಅಧೀನವಾಗಿಯೇ ಹರಿದ ಸಾಹಿತ್ಯದ ಕಾಲ ಎಂಬುದನ್ನು ಗುರುತಿಸಬಹುದು.

ಪ್ರತಿಯೊಂದು ಸಮಾಜದಲ್ಲಿ ಪ್ರತಿಯೊಂದು ಹೆಣ್ಣಿಗೆ ಮತ್ತು ಆಕೆಯ ಜೀವನಕ್ಕೆ ಸಂಬಂಧಿಸಿದಂತೆ ವಿವರಣೆಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡುವ ಸಾಹಿತ್ಯವೇ ಸ್ತ್ರೀ ಪ್ರಧಾನ ಸಾಹಿತ್ಯವಾಗಿದೆ. ಸ್ತ್ರೀ ಸಮಸ್ಯೆಗಳ ವಿಶ್ಲೇಷಣೆ ಇನ್ನು ಮುಂತಾದವು ಮಹಿಳಾ ಕಥಾಸಾಹಿತ್ಯದಲ್ಲಿ ಸ್ತ್ರೀ ಪಾತ್ರಗಳು ತಮ್ಮದೇ ಆದ ಆಂತರಿಕ ಭಾವನೆಗಳು ಮತ್ತು ಜೀವನದ ವಿವರಣೆಗಳನ್ನು ಅಭಿವ್ಯಕ್ತಿಸುವಲ್ಲಿ ಪ್ರಮುಖವಾಗಿರುತ್ತದೆ. ಹೆಣ್ಣು ದೈಹಿಕವಾಗಿ ಗಂಡಿಗಿಂತ ಭಿನ್ನವಾಗಿರುವ ಕಾರಣಕ್ಕಾಗಿ ಅವಳಿಗೆ ಆಗುವ ಅನುಭವಗಳು ಒಂದು ಕಡೆಯಾದರೆ, ಮೂಲತಃ ಹುಟ್ಟುವಾಗಲೇ ಹೆಣ್ಣಾಗಿ ಜನಿಸುವ ಕಾರಣ ಅವಳಿಗೆ ಸಮಾಜದಲ್ಲಿ ವಿಶಿಷ್ಟವಾದ ಅನುಭವಗಳು ಆಗುತ್ತವೆ. ಉದಾಹರಣೆಗೆ ಗೌರವದ, ಅವಮಾನ ಮತ್ತು ಮುಜುಗರದ ಅನುಭವಗಳು. ಮತ್ತೊಂದೆಡೆ ಗಂಡಿಗೆ ಆಗದ ಅನುಭವಗಳು, ಅಂದರೆ ಒಂದು ವೇಳೆ ಅವಳ ಬಣ್ಣ ಕಪ್ಪಾಗಿದ್ದರೆ, ಆಕೆ ಮುಸ್ಲಿಂ ಮಹಿಳೆಯಾಗಿದ್ದರೆ, ಕುರುಡಿ ಆಗಿದ್ದರೆ, ಕುಂಟಿ ಆಗಿದ್ದರೆ ಆ ಮಹಿಳೆಗೆ ಬೇರೆ-ಬೇರೆ ಅನುಭವಗಳು ಆಗಿರುತ್ತದೆ ಎಂಬುದನ್ನು ಭಾವಿಸಬಹುದಾಗಿದೆ.

ಮಹಿಳೆ ತನ್ನ ಬದುಕನ್ನು ಗ್ರಹಿಸುವ ಬಗ್ಗೆ ಬೇರೆ ಪುರುಷರಿಗಿಂತ ಸ್ವಲ್ಪ ಭಿನ್ನವಾದ ರೀತಿಯಲ್ಲಿ ಗ್ರಹಿಸುವಿಕೆ, ನಿರೀಕ್ಷೆ, ಹತಾಶೆ, ಕನಸು, ಸುಖ-ದುಃಖಗಳು ಜ್ಞಾನವಾಗಿದೆ. ಈ ಹಿನ್ನೆಲೆಯಲ್ಲಿ ಹತಾಶೆ ಅವಳು ಸೃಷ್ಟಿಸಿದ ಕೃತಿಯಲ್ಲಿ ಹೆಣ್ಣಾಗಿ ಅವಳು ಬದುಕನ್ನು ಕಂಡುಕೊಂಡು ಇರುವ ಪಾತ್ರ ಇದ್ದೇ ಇರುತ್ತದೆ. ಮಹಿಳಾ ಬರಹಗಳ ಈ ವೈಶಿಷ್ಟ್ಯತೆ, ವಿಭಿನ್ನತೆಯನ್ನು ಗಮನಿಸಿಯೇ ಮಹಿಳಾ ಸಾಹಿತ್ಯ, ಮಹಿಳಾ ಸಂವೇದನೆ ಎಂಬ ವಿಶೇಷಣಗಳನ್ನು ಬಳಸಲಾಗುತ್ತದೆ. ಆಧುನಿಕ ಕನ್ನಡ ಸಾಹಿತ್ಯದಲ್ಲಿ ಸುಮಾರು 1970 ರಿಂದ ಈಚೆಗೆ ಬರಹಗಳ ಅಧ್ಯಯನ ಮಹತ್ವ ಪಡೆದುಕೊಂಡಿದೆ ಎಂಬುದನ್ನು ಗಮನಿಸಬಹುದು. ಮಹಿಳೆಯರು ತಮ್ಮ ಕಥೆಗಳ ಮೂಲಕ ವಿಚಾರಗಳ ಸ್ಪಷ್ಟ ಮಾಹಿತಿಗಳನ್ನು ತಿಳಿಸಿ ಹೇಳುವಂತಹುದು ಸುಲಭದ ವಿಚಾರವಲ್ಲ, ಕಥೆಗಳ ಮುಖೇನ ಹೊಸದಾದ ರೀತಿಯಲ್ಲಿ ಮಾಹಿತಿಯೊಂದನ್ನು ನೀಡುವ ಪ್ರಯತ್ನ ಮಾಡಿರುತ್ತಾರೆ. ಸಮಾಜವಾದಿ ಚಿಂತನೆಗಳನ್ನು ಮಹಿಳಾ ವಿಷಯಗಳಿಗೆ ಸಂಬಂಧಿಸಿದಂತೆ ಪಿತೃಪ್ರಧಾನ ಬಂಡವಾಳಶಾಹಿಯು ಬಲಗೊಳ್ಳುವ ಮೂಲಕ ಮಹಿಳೆಯರನ್ನು ಶೋಷಣೆಗೆ ಒಳಪಡಿಸುತ್ತಿದೆ. ಇದರ ಮೂಲಕ ತನ್ನ ಸ್ಥಾನಮಾನಗಳನ್ನು ಎತ್ತರಕ್ಕೆ ಕೊಂಡು ಸಾಗುವ ಜೊತೆಗೆ ಹೆಂಗಸರು ಸದಾಕಾಲ ಎರಡನೆಯ ದರ್ಜೆಯ ನಾಗರಿಕರಾಗಿಯೇ ಉಳಿಯುವಂತೆ ಮಾಡುತ್ತಿದೆ. ಹಾಗೆಯೇ ತನ್ನ ಯಜಮಾನಿಕೆಯ ಸ್ಥಾನಕ್ಕೆ ಕುಂದು ಬಾರದಂತೆ ನಡೆದುಕೊಳ್ಳುವ ಅಂಶಗಳನ್ನು ನಾವು ಸಾಮಾಜಿಕವಾಗಿ ಗಮನಿಸಬಹುದು.

ಪ್ರಾಬಲ್ಯವನ್ನು ಪ್ರಯೋಗಿಸುವ ಎಲ್ಲ ಮುಂದಾಳುತನದ (Hegemonic) ರೂಪಗಳಂತೆ, ಈ ಪಿತೃಪ್ರಧಾನ ವ್ಯವಸ್ಥೆಯೂ ಬಲಾತ್ಕಾರದ ಅಧಿಕಾರ ಮತ್ತು ಮನವೊಲಿಸುವ ಸೂಕ್ಷ್ಮ ಶಕ್ತಿಗಳನ್ನು ಮೇಳೈಸಿದೆ. ಗಂಡು ಅಥವಾ ಹೆಣ್ಣಿನ ಅಧಿಕಾರ ಸಂಬಂಧವನ್ನು ಸೂಚಿಸುವ ತಲೆಕೆಳಗು ಮತೀಯ ರೂಪದಲ್ಲಿ ಇದು ಸಾಮಾನ್ಯವಾಗಿ ಅಭಿವ್ಯಕ್ತಿಸಲ್ಪಟ್ಟಿದೆ. ಸ್ತ್ರೀ ಎಂದರೆ ದೇವತೆ ಅಥವಾ ಸ್ತ್ರೀ ಜನಾಂಗದ ತಾಯಿ ಎನ್ನುವ

ಅತಿ ಸ್ತುತಿಗಳನ್ನು ಗಮನಿಸಿದಾಗ ಭಾರತದ ಅಭಿಜಾತ ಧರ್ಮಗಳಲ್ಲಿ ಅಥವಾ ಮಧ್ಯಯುಗದ ಧಾರ್ಮಿಕ ಆಚರಣೆಗಳಲ್ಲಿ ಈ ಬಗೆಯ ಸಾಹಿತ್ಯ ಕಲೆ, ಚಿತ್ರಿತವಾದ ಸತಿ–ಸಾವಿತ್ರಿ, ಸೀತೆ ಅರ್ಥಕಲ್ಪನೆಯನ್ನು ಉಂಟುಮಾಡಿದ ಈ ನಿರ್ದಿಷ್ಟ ಮತೀಯ ರೂಪ ಮಾತ್ರ ನಿಸ್ಸಂದೇಹವಾಗಿ ಹೊಸಕಾಲದ್ದು ಎಂಬುದಾಗಿ ಹೇಳಿರುವ ಸ್ತ್ರೀವಾದಿ ಸಾಹಿತ್ಯ ವಿಮರ್ಶೆಯ ವಿಚಾರವು ಸೂಕ್ತವಾಗಿದ್ದು ಅದನ್ನು ನಾನು ಕೂಡ ಒಪ್ಪಿಕೊಂಡಿರುತ್ತೇನೆ. ಸ್ತ್ರೀವಾದಿ ವಿಮರ್ಶೆಯು ಸಾಮಾಜಿಕ ಬೌದ್ಧಿಕ ಪರಂಪರೆಗಳನ್ನೇ ಪರೀಕ್ಷಿಸುವ ಒಂದು ದೃಷ್ಟಿಕೋನ. ಮಹಿಳೆಯ ಅಧಿಕಾರ ಸಂಬಂಧಗಳ ಸಾಮಾಜಿಕ ಅರ್ಥ ಕಲ್ಪನೆಯು ಹೇಗೆ ಕಟ್ಟಲ್ಪಟ್ಟಿದೆ ಎನ್ನುವುದರ ಮೇಲೆ ಒತ್ತು ಕೊಡುವುದೇ ಸ್ತ್ರೀವಾದಿ ವಿಮರ್ಶೆಯ ವೈಶಿಷ್ಟ್ಯವಾಗಿದೆ ಎಂಬುದನ್ನು ಒಪ್ಪಿಕೊಳ್ಳುತ್ತೇನೆ.

ಮಹಿಳೆಯರು ತಮ್ಮ ಬದುಕಿಗೆ ಹೊಸದಾದೊಂದು ಅರ್ಥವನ್ನು ಹುಡುಕುವ ಸಲುವಾಗಿ ತಮ್ಮ ಮತ್ತು ಸಮಾಜದ ಸಂಬಂಧಗಳ ತೊಡಕು ಯಾತನೆಗಳಿಗೆ ನುಡಿಕೊಡಲು ಯತ್ನಿಸುತ್ತಿದ್ದಾರೆ. ಈ ಯತ್ನಕ್ಕೆ ಮಹಿಳಾ ಪ್ರಜ್ಞೆ (Women's Con–sciousness), ಸಮಗ್ರತೆಗಾಗಿ ಹುಡುಕಾಟ (The Search for Wholeness), ತನ್ನ ತನದ ಸಾಕ್ಷಾತ್ಕಾರ (Discovery of the Self) ಮುಂತಾದ ಪರಿಭಾಷೆ, ಅವುಗಳ ವ್ಯಾಖ್ಯೆಗಳು ಹುಟ್ಟಿಕೊಳ್ಳುತ್ತಿರುವುದನ್ನು ಕಾಣಬಹುದಾಗಿದೆ. ಸಂಪಾದಕರಾದ ತೇಜಸ್ವಿನಿ ನಿರಂಜನ, ಶ್ರೀಮತಿ ನಿರಂಜನರವರು 'ಸ್ತ್ರೀವಾದಿ ಸಾಹಿತ್ಯ ವಿಮರ್ಶೆ: ಸಂಸ್ಕೃತಿ, ಇತಿಹಾಸ, ರಾಜಕಾರಣ, ಭಾರತೀಯ ಸಂದರ್ಭ' ಎಂಬ ಬರಹಗಳ ಅಡಿಯಲ್ಲಿ ಕನ್ನಡ ಮಹಿಳಾ ಸಾಹಿತ್ಯ ಮತ್ತು ಸ್ತ್ರೀತತ್ವದ ಶೋಧ ಬಿ.ಎನ್. ಸುಮಿತ್ರಾಬಾಯಿಯವರು ಹೇಳಿರುವಂತೆ ಸ್ತ್ರೀ ಸಂವೇದನೆ ಎಂದರೆ ಜಗತ್ತನ್ನು ನೋಡುವ ದೃಷ್ಟಿಯಲ್ಲಿ ಸ್ತ್ರೀ–ಪುರುಷರ ನಡುವೆ ಆಳವಾದ ಮೂಲಭೂತವಾದ ಅಂತರವೇ ಸ್ತ್ರೀಸಂವೇದನೆಯ ಮೂಲವೆಂದು, ಪಿತೃಪ್ರಧಾನ ಸಾಹಿತ್ಯ ಪರಂಪರೆ ಗ್ರಹಿಸುತ್ತದೆ. ಅಂದರೆ ಸ್ತ್ರೀಯಾಗಿ ಹುಟ್ಟಿರುವುದೇ ಈ ವಿಶಿಷ್ಟ ಸಂವೇದನೆಯ ಮೂಲವೆಂದು ಹೇಳಿದಂತೆ ಆಯಿತು. ಮಹಿಳೆಯರ ಅನುಭವವನ್ನು ಅವರದೇ ಆದ ರೀತಿಯಲ್ಲಿ ವರ್ಣಿಸುವುದು ಈ ಸ್ತ್ರೀ ಸಂವೇದನೆಯೆಂಬುದರ ಅರ್ಥ ವ್ಯಾಖ್ಯೆ ಎಂದಿದ್ದಾರೆ.

ಸೂಕ್ತವಾದ ಅರ್ಥದ ಹುಡುಕಾಟದ ಸಂದರ್ಭದಲ್ಲಿ ಮೇರಿ ಡೇಲಿಯ (Gyn/Ecology–1978) ಎಂಬ ತನ್ನ ಕೃತಿಯಲ್ಲಿ (Gyn/Aesthesia) ಒಂದು ಹೊಸ ಪರಿಭಾಷೆಯನ್ನು ಬಳಸಿದರು. (Gyn) ಎಂದರೆ ಹೆಣ್ಣು, (Aesthesia) ಎಂದರೆ ಅರಿವಳಿಕೆ ವೈದ್ಯಕೀಯದಲ್ಲಿ ಬಳಸುವ ಒಂದು ಪದ. ಅದರ ಒಂದು ಭಾಗವನ್ನು (Aesthesia) ಎಂಬುದನ್ನು ಅರಿವು, ಸಂವೇದನೆ ಎಂಬ ಅರ್ಥದಲ್ಲಿ ಒಟ್ಟುಗೂಡಿಸಿ ಬಳಸಿದ ಪದ. ಸ್ತ್ರೀವಾದಿಯು ಇಡೀ ಲೋಕವನ್ನು ಗ್ರಹಿಸುವ ಮತ್ತು ಅರ್ಥೈಸಿಕೊಳ್ಳುವ ಒಂದು ಹೊಸ ಬಗೆಯನ್ನು ಕಂಡುಕೊಳ್ಳುತ್ತಾಳೆ. ಈ ಪ್ರಕ್ರಿಯೆಯನ್ನು ವಿವರಿಸಲು ಮೇರಿ ಡೇಲಿ ಸ್ತ್ರೀ ಸಂವೇದನೆ ಎಂಬ ಪರಿಕಲ್ಪನೆಯನ್ನು ಬಳಸಿದ್ದಾಳೆ. ಸ್ತ್ರೀಸಂವೇದನೆ ಎನ್ನುವುದು ಒಂದಕ್ಕೊಂದು ಸಂಬಂಧವಿಲ್ಲದ ಹಲವು ಸಂಗತಿಗಳ ನಡುವೆ ಪರಸ್ಪರ ಸಂಬಂಧಗಳನ್ನು ಕಾಣುವ ಒಂದು ವಿಶೇಷ ಸಾಮರ್ಥ್ಯ. ಹಾಗಾಗಿ

ಸಾಮಾನ್ಯ ಕಣ್ಣೋಟಕ್ಕೆ ಬಿಡಿಬಿಡಿಯಾಗಿ ಕಾಣುವ ಸುತ್ತಲಿನ ವಾತಾವರಣವನ್ನು ಒಂದು ಸಮಗ್ರತೆಯಲ್ಲಿ ಗ್ರಹಿಸುವ ಒಂದು ವಿಶೇಷ ಗ್ರಹಿಕೆಗೆ ಮಾತ್ರ ದಕ್ಕುವಂತಹ ಸಂವೇದನೆ. ಕನ್ನಡದಲ್ಲಿ ಹೆಣ್ಣುನೋಟ, ಹೆಣ್ಣು ಸಂವೇದನೆ ಎಂಬ ಬಳಕೆಗಳಿದ್ದು, ಅವು ಸಾಕಷ್ಟು ಸಮರ್ಥವಾಗಿರುತ್ತವೆ ಎಂಬುದನ್ನು ಎಚ್.ಎಸ್.ಶ್ರೀಮತಿ 'ಸ್ತ್ರೀವಾದ ಪದವಿವರಣಕೋಶ' ಎಂಬುದರಲ್ಲಿ ತಿಳಿಸಿರುತ್ತಾರೆ. ಮಹಿಳಾ ಕಥಾಸಾಹಿತ್ಯದಲ್ಲಿ ಗಮನಿಸಿದಾಗ ಇವರು ಹೇಳಿರುವ ಅಂಶಗಳನ್ನು ಒಪ್ಪಿಕೊಳ್ಳುತ್ತಾ ಕಥೆಗಳನ್ನು ಗಮನಿಸಿದಾಗ, ಕಥೆಗಾರ್ತಿಯರು ವಿಭಿನ್ನ ರೀತಿಯಲ್ಲಿ ತಮಗೆ ಆದ ಅನುಭವಗಳನ್ನು, ಒಬ್ಬೊಬ್ಬರೂ ತಮ್ಮದೇ ಆದ ರೀತಿಯಲ್ಲಿ ವಿವರಿಸುವ ಪ್ರಯತ್ನದಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವುದನ್ನು ನಾವು ಕಾಣಬಹುದಾಗಿದೆ. ಕೆಲವು ಕಥೆಗಾರ್ತಿಯರು ತಮ್ಮ ಕಥೆಗಳಲ್ಲಿ ಭಿನ್ನ ಸಂಗತಿಗಳೊಂದಿಗೆ ತಮ್ಮನ್ನು ಗುರುತಿಸಿಕೊಳ್ಳುತ್ತಾ, ತಮ್ಮ ಚಿಂತನೆಗಳೊಂದಿಗೆ ಹಾದಿಗಳನ್ನು ಕಲ್ಪಿಸುತ್ತಾ ಸಾಗಿರುವುದು ನಮಗೆ ಕಂಡುಬರುತ್ತದೆ.

ಮಹಿಳಾ ಕಥೆಗಳಲ್ಲಿ ವಿಭಿನ್ನ ನೆಲೆಗಳನ್ನು ಕೂಡ ನಾವು ಗಮನಿಸಬಹುದಾಗಿದೆ. ಕೆಲವರು ವರ್ಗ, ಜಾತಿ, ಜನಾಂಗಗಳ ಎಳೆಗಳನ್ನು ಎತ್ತಿಕೊಳ್ಳುವ ಮೂಲಕ ಸ್ತ್ರೀಕೇಂದ್ರಿತ ಚಿಂತನೆಗಳನ್ನು ಕಟ್ಟುತ್ತಾರೆ. ಇನ್ನೂ ಕೆಲವರು ಪುರುಷರಿಗೆ ಮಾತ್ರ ನೀಡುವ ಪ್ರಧಾನ್ಯತೆಯನ್ನು ಹೊರತುಪಡಿಸಿ, ಮಹಿಳೆಯರಿಗೂ ಕೂಡ ಸಮಾನತೆಯನ್ನು ತರುವ ದೃಷ್ಟಿಕೋನದಲ್ಲಿ ವರ್ಗ, ಜಾತಿ, ಜನಾಂಗಗಳನ್ನು ಎತ್ತಿಕೊಳ್ಳುವ ಮೂಲಕ ಸ್ತ್ರೀಕೇಂದ್ರಿತ ಚಿಂತನೆಗಳನ್ನು ಕಟ್ಟುತ್ತಾರೆ. ಇನ್ನೂ ಕೆಲವರು ಪಿತೃಪ್ರಧಾನ ಸಂಸ್ಕೃತಿಯ ಏಕಮುಖತೆ, ಏಕಲಿಂಗ ಪಕ್ಷಪಾತ ಮತ್ತು ಏಕಪಕ್ಷೀಯ ಮೌಲ್ಯಗಳನ್ನು ಮತ್ತೆ ಎತ್ತಿಹಿಡಿದು ಪ್ರತಿಪಾದಿಸುವ ಮೂಲಕ ಅವುಗಳನ್ನು ಶಾಶ್ವತಗೊಳಿಸಲು ಸದಾ ಪ್ರಯತ್ನಶೀಲರಾಗಿದ್ದಾರೆ. ಇಂಥ ವ್ಯವಸ್ಥೆಗೆ ಸಾಹಿತ್ಯವೂ ಒಂದು ಪ್ರಬಲ ಪ್ರತಿ ಅಸ್ತ್ರವಾಗಿರುವುದು ಎಂಬುದನ್ನು ಗುರುತಿಸಿಕೊಂಡು, ಕಥಾಸಾಹಿತ್ಯದ ಮೂಲಕವಾಗಿ ಈ ಪಿತೃಪ್ರಧಾನ ತಾತ್ವಿಕತೆಯ ಆಯಾಮಗಳನ್ನು ಗುರುತಿಸಿ ವಿಮರ್ಶಿಸಬಹುದು. ಇಂದಿಗೂ ಕಥೆಗಾರ್ತಿಯರ ಮುಖ್ಯ ಗುರಿಗಳಲ್ಲಿ ಇದೂ ಒಂದಾಗಿದೆ. ಮಹಿಳೆಯರು ತಮ್ಮ ಕಥೆಗಳಲ್ಲಿ ಸ್ತ್ರೀ–ಪುರುಷರ ಲೈಂಗಿಕ ಸಂದರ್ಭದಲ್ಲಿ ಗಂಡಸಿನ ಪಾತ್ರವನ್ನೇ ವೈಭವೀಕರಿಸಿ ಸಶಕ್ತವಾದುದೆಂದು, ಗಂಡು ಮೇಲುಗೈ ಸಾಧಿಸಿದಂತೆ ಚಿತ್ರಿಸಿರುವರು. ಹೆಣ್ಣನ್ನು ಗಂಡಿನ ಭೋಗಕ್ಕೆ ಒದಗಬೇಕಾದ ವಸ್ತುವೆಂಬಂತೆ ಮಾತ್ರ ಕಲ್ಪಿಸಿ, ಆಕೆಯ ವ್ಯಕ್ತಿತ್ವ ಬದುಕುಗಳನ್ನು ಹೀನಾಯವಾಗಿ ಚಿತ್ರಿಸುವುದು, ಇಲ್ಲವೆ ಪರಿಮಿತಗೊಳಿಸುವುದು, ಆಕೆಯ ಅಸ್ಮಿತೆ ಸಮಗ್ರತೆಗೆ ಬೆಲೆ ಕೊಡದೆ ಪರಂಪರಾಗತವಾದ ಲೈಂಗಿಕತೆ ಸಂತಾನೋತ್ಪಾದನೆಗಷ್ಟೇ ಆಕೆಯ ವ್ಯಕ್ತಿತ್ವವನ್ನು ಇಳಿಸಿಬಿಡುವ ಲಿಂಗವಾದಿ ಧೋರಣೆಗಳನ್ನು ಮಹಿಳಾ ಕಥೆಗಾರ್ತಿಯರು ಪ್ರಶ್ನಿಸುತ್ತಾರೆ.

**ವಿಭಿನ್ನ ಕಾಲಘಟ್ಟಗಳಲ್ಲಿ ಕಥೆಗಾರ್ತಿಯರು ತಮ್ಮ ಕಥೆಗಳನ್ನು ಬರೆಯಲು ಮುಂದಾಗುತ್ತಾರೆ:**

1. ನವೋದಯ ಕಾಲದ ಕಥೆಗಾರ್ತಿಯರು
2. ಪ್ರಗತಿಶೀಲ ಕಥೆಗಾರ್ತಿಯರು
3. ನವ್ಯೋತ್ತರ ಕಥೆಗಾರ್ತಿಯರು

ಹೀಗೆ ಮೂರೂ ಸಾಹಿತ್ಯ ಪಥದಲ್ಲಿ ಕತೆಗಾರ್ತಿಯರನ್ನು ಗುರುತಿಸಬಹುದು. ಕಥೆಗಾರ್ತಿಯರ ವಿಚಾರಗಳಲ್ಲಿ, ಒಂದು ಹೆಣ್ಣು ಸಮಾಜದಲ್ಲಿ ತನ್ನನ್ನು ತಾನು ಒಂದು ಚೌಕಟ್ಟಿನಡಿಯಲ್ಲಿಟ್ಟುಕೊಳ್ಳುವ ಮುಖೇನ ಸಮಾಜಕ್ಕೆ ಹೆದರುತ್ತಾ ಮನೆಯ ಒಳಗೆ ಹಾಗೂ ಮನೆಯ ಹೊರಗೆ ಒಬ್ಬ ತಾಯಿಯಾಗಿ, ಗಂಡನಿಗೆ ಮಡದಿಯಾಗಿ, ಅತ್ತೆಗೆ ಸೊಸೆಯಾಗಿ, ಮುಂದಿನ ದಿನಗಳಲ್ಲಿ ತಾನೂ ಒಬ್ಬ ಅತ್ತೆಯಾಗಿ, ಎಲ್ಲಾ ರೀತಿಯಾದಂತಹ ಕಾರ್ಯಗಳನ್ನು ಜವಾಬ್ದಾರಿಯುತವಾಗಿ ನಿಭಾಯಿಸುತ್ತಾ ಸಾಗುತ್ತಾಳೆ. ಎಷ್ಟೇ ಕರ್ತವ್ಯ ನಿಷ್ಠೆಯಿಂದ ತಾನು ತನ್ನ ಬದುಕನ್ನು ತಾಳ್ಮೆ, ಸಹನೆ, ತ್ಯಾಗ, ವಿನಯತೆಗಳಿಗೆ ಸೀಮಿತಗೊಳಿಸಿಕೊಂಡಿರುವುದನ್ನು ಕಾಣಬಹುದಾಗಿದೆ. ಇತ್ತೀಚಿನ ದಿನಗಳಲ್ಲಿ ಕಥೆಗಾರ್ತಿಯರು ತಮ್ಮ ಕಥೆಗಳಲ್ಲಿ ಸ್ತ್ರೀತತ್ವ ಕಲ್ಪನೆಯನ್ನು ಪಲ್ಲಟಗೊಳಿಸಲು ಸನ್ನದ್ಧರಾಗಿದ್ದಾರೆ. ನಿರ್ದಿಷ್ಟ ಬಗೆಯಲ್ಲಿ ಸ್ವಾತಂತ್ರ್ಯವನ್ನು ಸ್ಥಾಪಿಸಲು ಮೊದಲು ಮಾಡಿದ್ದಾರೆ. ಆದರೆ ಮಾನವ ಜೀವಿಗಳ ಒಂದು ಪರಿಪೂರ್ಣ ಬದುಕನ್ನು ತಮ್ಮದಾಗಿಸಿಕೊಳ್ಳುವುದು ಅವರಿಗೆ ಅಷ್ಟು ಸುಲಭವಲ್ಲ.

ಸ್ತ್ರೀ ಜಗತ್ತಿನೊಳಗೆ ಪೋಷಿತರಾಗುವ ಅವರಿಗೆ ಮುಖ್ಯ ಗುರಿ ಎಂದು ತೋರುವುದು ಮದುವೆ, ಅಂದರೆ ವಾಸ್ತವವಾಗಿ ಗಂಡನಿಗೆ ಅಧೀನವಾಗುವುದು. ಏಕೆಂದರೆ ಪುರುಷ ಹೆಮ್ಮೆ ಎಂಬುದು ಇನ್ನೂ ಬಲವಾಗಿದ್ದು ಆತ ಆರ್ಥಿಕ ಮತ್ತು ಸಾಮಾಜಿಕ ನೆಲೆಗಟ್ಟನ್ನು ಹೊಂದಿರುವುದರಿಂದ ಅದು ಇನ್ನೂ ನಾಶವಾಗಿಲ್ಲ. ಹೀಗಾಗಿ ನಾವು ಮಹಿಳೆಯರ ಭವಿಷ್ಯವನ್ನು ಕುರಿತು ಬಹು ಎಚ್ಚರದಿಂದ ಅಧ್ಯಯನ ಮಾಡಬೇಕಾಗಿದೆ. ಈ ಭಾಗದಲ್ಲಿ ಒಬ್ಬ ಹೆಣ್ಣು ಹೇಗೆ ತರಬೇತಿ ಪಡೆಯುತ್ತಾಳೆ, ಬೆಳೆಯುತ್ತಾಳೆ, ಹೇಗೆ ತನ್ನ ಸನ್ನಿವೇಶ ಸ್ವರೂಪದ ಅನುಭವವನ್ನು ಪಡೆಯುತ್ತಾಳೆ, ಯಾವ ಬಗೆಯ ಲೋಕದಲ್ಲಿ ಅವಳು ಸೀಮಿತಳಾಗಿದ್ದಾಳೆ, ಯಾವ ಸುರಕ್ಷಿತ ಬಿಡುಗಡೆಯ ಹಾದಿಗಳು ಅವಳಿಗೆ ಲಭ್ಯವಿದೆ ಎಂಬುದನ್ನು ವಿವರಿಸುವ ಹಾಗೂ ಇಷ್ಟೆಲ್ಲ ತಿಳಿದ ಮೇಲೆ ಮಾತ್ರ ಭೂತಕಾಲದ ಅಸಹನೀಯ ಭಾರದ ಉತ್ತರಾಧಿಕಾರಿಗಳಾಗಿರುವ ಮಹಿಳೆಯರ ಸಮಸ್ಯೆಗಳೇನು ಎಂಬುದನ್ನು ಸರಿಯಾಗಿ ಗ್ರಹಿಸಬಲ್ಲೆವು. ಕಥೆಗಳಲ್ಲಿ ಮಹಿಳೆ ಅಥವಾ ಸ್ತ್ರೀತ್ವ ಎಂಬ ಪದಗಳನ್ನು ಬಳಸುವ ಸಮಯದಲ್ಲಿ ಅವುಗಳನ್ನು ಮೂಲ ಪ್ರತೀಕಗಳು ಎಂಬುದಾಗಿ ಭಾವಿಸದೆ ಹಾಗೆಯೇ ಬದಲಾಗದ ಸ್ವಾರಸ್ಯ ರೂಪಿಗಳೆಂದು ಕೂಡ ತಿಳಿಯದೆ ಇರುವುದನ್ನು ಸಿಮೋನ್ ದ ಬೋವಾ "ದಿ ಸೆಕೆಂಡ್ ಸೆಕ್ಸ್" ನಲ್ಲಿ ತಿಳಿಸಿರುವಂತೆ, ಓದುಗರು ನನ್ನ ಎಲ್ಲಾ ಹೇಳಿಕೆಗಳ ನಂತರ ಸದ್ಯದ ಶಿಕ್ಷಣ ಮತ್ತು ಪದ್ಧತಿಗಳ ಸಂದರ್ಭದಲ್ಲಿ ಎಂಬ ಅರ್ಥವಿರುವುದನ್ನು ಗ್ರಹಿಸಬೇಕು. ಸಾರ್ವಕಾಲಿಕವಾದ ಶೋಧ ನಮ್ಮ ಗುರಿಯಲ್ಲ. ಪ್ರತಿ ಸ್ತ್ರೀ ಅಸ್ತಿತ್ವದ ಶೋಧನೆಯ ಅಡಿಯಲ್ಲಿ ಚೆನ್ನಾಗಿರುವ ಸಾಮಾನ್ಯ ಲಕ್ಷಣಗಳನ್ನು

ವಿವರಿಸುವುದು ನಮ್ಮ ಉದ್ದೇಶವಾಗಬೇಕು ಎಂದಿದ್ದಾರೆ. ಇದನ್ನು ನಾನು ಒಬ್ಬ ಸಂಶೋಧಕಿಯಾಗಿ ಮಹಿಳಾ ಕಥೆಗಳ ಹಿನ್ನೆಲೆಯಲ್ಲಿ ಇದನ್ನು ಸೂಕ್ಷ್ಮವಾಗಿ ಗಮನಿಸಿದಾಗ ಒಪ್ಪಿಕೊಳ್ಳಲೇಬೇಕು ಎಂಬುದು ನನ್ನ ಗ್ರಹಿಕೆಯ ಅಂಶವಾಗಿರುತ್ತದೆ.

ಮಹಿಳೆಯರು ತಮ್ಮ ಕಥೆಗಳಲ್ಲಿ ಸಮಾಜದಲ್ಲಿ ಮನುಷ್ಯನನ್ನು ಇತರೆ ಜೀವವರ್ಗಗಳಿಂದ ಬೇರೆ ಮಾಡಿ ನೋಡಿದಾಗ ಅದರಂತೆ ಮನುಷ್ಯರಿಗೆ ಯಾವ ಜೀವವರ್ಗಕ್ಕೂ ಇರದ ಪ್ರಜ್ಞೆಯಿದೆ ಎಂಬುದು ಒಂದು ನೆಲೆಯಾದರೆ, ಪ್ರತಿಯೊಬ್ಬ ಮನುಷ್ಯರೂ ಸ್ವತಂತ್ರ ಎನ್ನುವುದು ಇನ್ನೊಂದು ನೆಲೆ. ಸ್ವತಂತ್ರರು ಎನ್ನುವುದಕ್ಕಿಂತ ಸ್ವಾತಂತ್ರ್ಯದ ಆಯ್ಕೆಯ ಅವಕಾಶ ಪ್ರತಿಯೊಬ್ಬ ಮನುಷ್ಯರಿಗೂ ಇರುತ್ತದೆ ಎನ್ನುವುದು ಸರ್ವಕಾಲಿಕವಾಗಿ ಹೆಚ್ಚು ಸರಿಯಲ್ಲವೇ? ಹಾಗಾಗಿ ಪ್ರತಿಯೊಬ್ಬ ಕಥೆಗಾರ್ತಿಯರ ಪ್ರಮುಖ ಚಿಂತನೆಗಳು ಸಮಾಜವು ಬದಲಾಗಬೇಕು, ಸುಧಾರಿಸಬೇಕು ಎಂಬುದನ್ನು ಪದೇ ಪದೇ ಜಪ ಮಾಡುತ್ತಿದೆ ನಿಜ. ಆದರೆ ಇದು ಸಾಧಿತವಾಗುವುದು ಹೇಗೆ ಎಂಬ ಕ್ರಿಯಾಯೋಜನೆ ಇಲ್ಲದಿದ್ದರೆ, ಮದುವೆಯಾಗದೇ ಹುಚ್ಚು ಬಿಡದು ಎಂಬ ಗಾದೆಯಂತೆ, ವಿಷವರ್ತುಲವೊಂದು ನಿಯತವಾಗಿಬಿಡುತ್ತದೆ. ಹೆಣ್ಣು ಇದರ ಹೊಣೆಯನ್ನು ತಾನೇ ಹೊರಲು ಸಿದ್ಧಗೊಂಡ ಹೊರತು ಬಿಡುಗಡೆಯ ಹಾದಿ ಕಾಣಬಾರದು ಎಂಬುದನ್ನು ಅರಿತಿರುವ ಕಥೆಗಾರ್ತಿ, ತಮ್ಮದೇ ಆದ ವೈಯಕ್ತಿಕ ದೃಷ್ಟಿಕೋನದ ಹಿನ್ನೆಲೆಯಲ್ಲಿ ಕಥೆಗಳಲ್ಲಿ ಸ್ತ್ರೀಪಾತ್ರಗಳ ಮೂಲಕ ತಿಳಿಯಪಡಿಸುತ್ತಾರೆ. ಅಸಾಧಾರಣವಾದ ಬೆಳವಣಿಗೆ ಮತ್ತು ಬದಲಾವಣೆ ಕಂಡುಬರುವಂತೆ ಮಾಡುವ ಮೂಲಕ ಆರಂಭದಲ್ಲಿ ಹೊಂದಾಣಿಕೆ ಮಾಡಿಕೊಂಡು ಬದುಕುತ್ತಿದ್ದ ಸ್ತ್ರೀಪಾತ್ರಗಳಲ್ಲಿ ಕೊನೆ-ಕೊನೆಗೆ ಪ್ರತಿರೋಧದ ನಡುವೆ ಹೊಸದರ ಸೃಷ್ಟಿಗೆ ಕಾರಣವಾಗುವುದನ್ನು ಗುರುತಿಸಬಹುದಾಗಿದೆ.

ಕಥೆಗಾರ್ತಿಯರಲ್ಲಿ ನವ್ಯೋತ್ತರ ಕಥನ ಕಲೆಯ ನೆಲೆಗಳಲ್ಲಿ ವೈದೇಹಿ, ಸಾರಾ ಅಬೂಬಕರ್, ಗೀತಾ ನಾಗಭೂಷಣ್, ನೇಮಿಚಂದ್ರ, ಇನ್ನೂ ಮುಂತಾದವರು ತಮ್ಮ ಕಥೆಗಳ ಮೂಲಕ ಸ್ತ್ರೀ ಸಂವೇದನೆಯ ಮೂಲಕ ಭಾವ-ನಿರ್ಭರವಾದ ಕಾವ್ಯಮಯ ಭಾಷೆಯಲ್ಲಿ ಇಡೀ ಸಂಸ್ಕೃತಿಯ ಶೋಧನೆಗೆ ಯತ್ನಿಸುತ್ತಾರೆ. ಕಥೆಗಾರ್ತಿಯರು ಕೆಲವು ಕಥೆಗಳಲ್ಲಿ ಪುರುಷನ ಸ್ವಾರ್ಥ, ದೌರ್ಜನ್ಯದಲ್ಲಿ, ನಿರಂತರ ಶೋಷಿತಳಾಗಿದ್ದರೂ ಕಷ್ಟಪಟ್ಟು ಸ್ವತಂತ್ರವಾಗಿ ಬದುಕುವುದನ್ನು ಆರಿಸಿಕೊಳ್ಳುತ್ತಾಳೆ. ಅದರ ಜೊತೆಗೆ ಬದುಕನ್ನು ತೆರೆದ ಮನಸ್ಸಿನಿಂದ ನೋಡುವ ಮನೋಧರ್ಮ ಹಾಗೂ ಪ್ರಾಮಾಣಿಕತೆಯ ಅಭಿವ್ಯಕ್ತಿ ಪ್ರಧಾನವಾಗಿದೆ. ಇತ್ತೀಚೆಗೆ ಸ್ತ್ರೀಲೋಕದ ಒಳಹೊರಗಿನ ದನಿಗಳನ್ನು ಎತ್ತಿಹಿಡಿಯುವಲ್ಲಿ ಇತ್ತೀಚಿನ ದಿನಗಳಲ್ಲಿ ಬಹಳಷ್ಟು ಕಥೆಗಳು ಯಶಸ್ವೀ ರಚನೆಗಳಾಗಿವೆ. ಕನ್ನಡ ಕಥಾಸಾಹಿತ್ಯದ ಬೆಳವಣಿಗೆಯಲ್ಲಿ ಮಹಿಳಾ ಕಥಾಸಾಹಿತ್ಯದ ನೆಲೆಗಳು ಅನೇಕ ಮಾದರಿಗಳಿಂದ ಕೂಡಿರುವುದರಿಂದ ಸಾಂಸ್ಕೃತಿಕ ಭಿನ್ನ ಮಾದರಿಗಳೇ ಕನ್ನಡ ಕಥಾಸಾಹಿತ್ಯಕ್ಕೆ ವೈವಿಧ್ಯತೆ ಹಾಗೂ ಸಮೃದ್ಧತೆಯನ್ನು ತಂದುಕೊಡುವ ಮೂಲಕ ಹೊಸ-ಹೊಸ ಆಯಾಮಗಳನ್ನು ಹುಡುಕಿ ಕಥೆಗಳ ಮೂಲಕ ಜನರಲ್ಲಿ ವಿಚಾರ ಪ್ರಚೋದನೆಯಾಗುವ ರೀತಿಯಲ್ಲಿ ತಮ್ಮ ಕಥಾ

ತಂತ್ರವನ್ನು ರೂಪಿಸಿಕೊಳ್ಳುತ್ತಾರೆ. ಸಮಸ್ಯೆಯನ್ನು ಚಿತ್ರಿಸುವ ಮೂಲಕ ಪರಿಹಾರಗಳನ್ನು ಕಂಡುಕೊಳ್ಳುವ ಪ್ರಯತ್ನಗಳು ಹೆಚ್ಚು ಬೆಳಕಿಗೆ ಬರುತ್ತದೆ.

ಪ್ರತಿಯೊಂದು ಅಧ್ಯಯನಗಳು ತಮ್ಮ ಸಿದ್ಧಾಂತಗಳ ಚರ್ಚೆಗಳನ್ನು ನಡೆಸುವ ಉದ್ದೇಶಗಳಲ್ಲಿ ಪರಿಕಲ್ಪನೆಗಳನ್ನು ಸಿದ್ಧಪಡಿಸಿಕೊಂಡಿರುತ್ತವೆ. ಇಲ್ಲಿ ಪರಿಕಲ್ಪನೆಗಳು ಎಂದರೆ ಈ ಸಿದ್ಧಾಂತಗಳ ಸಾರವನ್ನು ಒಂದೆರೆಡು ಪದಗಳಲ್ಲಿ ಹಿಡಿದಿಡುವುದು ಎಂಬ ಗುರಿಯೇ ಇರುತ್ತದೆ. ಆದರೆ ಮಹಿಳಾ ಕಥೆಗಳ ಅಧ್ಯಯನಗಳು ರೂಪಿಸಿಕೊಳ್ಳುವ ಪರಿಕಲ್ಪನೆಗಳ ಸ್ವರೂಪವೇ ಸ್ವಲ್ಪ ಭಿನ್ನ ಬಗೆಯದು. ಇದಕ್ಕೆ ಮುಖ್ಯ ಕಾರಣ ಸ್ತ್ರೀವಾದ ಮಹಿಳಾ ಅಧ್ಯಯನಗಳಲ್ಲಿ ಪ್ರತಿಯೊಂದು ಅಧ್ಯಯನ ಶಿಸ್ತಿನಲ್ಲಿಯೂ ಅದರದರ ಚಿಂತನೆಗಳನ್ನು ಸಾರ ಸಂಗ್ರಹವಾಗಿ ಹೇಳುವ ಪರಿಕಲ್ಪನೆಗಳ ಪಟ್ಟಿಯೊಂದು ಪ್ರತ್ಯೇಕವಾಗಿ ಇರುವುದಿಲ್ಲ, ಬದಲಿಗೆ ವಿವಿಧ ಜ್ಞಾನ ಶಿಸ್ತುಗಳ ಮೂಲಕ ವಿಷಯಗಳನ್ನು ತಿಳಿಸುವ ಪ್ರಯತ್ನವನ್ನು ಕಾಣಬಹುದಾಗಿದೆ. ಹಲವಾರು ಅಧ್ಯಯನ ವಲಯಗಳ ಪರಿಕಲ್ಪನೆಗಳು ಈ ಸ್ತ್ರೀವಾದಿ ಕೋಶದಲ್ಲಿ ಒಟ್ಟೊಟ್ಟಿಗೆ ಎದುರಾಗುತ್ತವೆ. ಮ್ಯಾಗ್ ಹಮ್‌ಳ 'The Dictionary of Feminist Theory' ಯನ್ನು ಮಾದರಿಯಾಗಿ ಬಳಸಿದ್ದಾರೆ ಎಂಬುದನ್ನು ಗಮನಿಸಬೇಕಾಗಿದೆ.

ಕಥೆಗಾರ್ತಿಯ ಪ್ರಮುಖ ಆಶಯವೆಂದರೆ ಇಡೀ ಮಹಿಳಾ ಸಮುದಾಯವು ಒಂದು ಸೋದರಿತ್ವದ ಭಾವವನ್ನು ಹೊಂದಬೇಕೆಂಬುದು ಆಗಿದೆ. ಇಲ್ಲಿ ಪ್ರೀತಿ, ವಿಶ್ವಾಸಗಳು ಅಖಂಡವಾಗಿ ಇವೆಯಾದರೂ, ಔಪಚಾರಿಕವಾದ ಗೌರವದ ಸಂಬೋಧನೆಗಳು ಬೇಡವೆಂಬುದು ಇದೆ. ಕುವೆಂಪುರವರು ಹೇಳಿದಂತೆಯೇ ಇಲ್ಲಿ ಯಾರು ದೊಡ್ಡವರಲ್ಲ, ಯಾರೂ ಚಿಕ್ಕವರಲ್ಲ, ಎಲ್ಲರೂ ಸಮಾನರು. ಈ ಆಶಯವನ್ನು ಸ್ತ್ರೀವಾದಿಗಳು ಒಗ್ಗೂಡಿಸುತ್ತಿದ್ದ ಪ್ರಜ್ಞೆ, ಜಾಗೃತಿ ಮೂಡಿಸುವುದೇ ಕಥೆಗಾರ್ತಿಯರ ಮೂಲ ಉದ್ದೇಶವಾಗಿರುತ್ತದೆ.

ವೈದೇಹಿಯವರ "ಕ್ರೌಂಚ ಪಕ್ಷಿಗಳು" ಎಂಬ ಕಥೆಯಲ್ಲಿ ಲಕ್ಷ್ಮೀನಾರಾಯಣರವರನ್ನು (ಅಶ್ವಾರ್ಣ) ಕ್ರೌಂಚ ಪಕ್ಷಿಯೆಂಬುದಾಗಿ ಗುರುತಿಸುವ ಹಾಗೂ ಅವರ ಮೊದಲನೇ ಹೆಂಡತಿಯಾದ ಲಕ್ಷ್ಮಮ್ಮನವರ ಪಾತ್ರದ ಮೂಲಕ ಮನುಷ್ಯ ಮನುಷ್ಯನಾಗಿರುವುದು ಸಾಮಾನ್ಯ ಸ್ಥಿತಿಯಲ್ಲಿ ಮಾತ್ರ, ಸಿದ್ಧಾಂತ ತತ್ವ ರೀತಿ–ನೀತಿಗಳ ಬುಡ ತುಸುವೇ ಅಲ್ಲಾಡಿದರೂ ಮೊದಲು ಬಲಿಯಾಗುವುದು ಮಹಿಳೆ, ಅವಳ ದೇಹ, ಅವಳ ಮನಸ್ಸು, ಅವಳ ಬದುಕು ಎಂಬುದಾಗಿ ಹೇಳಿರುವುದನ್ನ ನಾನು ಒಪ್ಪಿಕೊಂಡಿರುತ್ತೇನೆ. ಇದು ನವ್ಯೋತ್ತರ ಕಥನ ನೆಲೆಯಾಗಿದ್ದು, ಇಲ್ಲಿ ಸ್ತ್ರೀ ಲೋಕದ ಮಾನಸಿಕ ಮತ್ತು ಬಾಹ್ಯ ದನಿಗಳನ್ನು ನಿರ್ಭಾವುಕತೆಯಿಂದ ಅಭಿವ್ಯಕ್ತಪಡಿಸಿರುವುದನ್ನು ಈ ಕಥೆಯಲ್ಲಿ ಕಾಣಬಹುದಾಗಿದೆ.

ಸಾರಾ ಅಬೂಬಕರ್ ಅವರ "ಚಪ್ಪಲಿಗಳು" ಎಂಬ ಕಥೆಯು ಮುಸ್ಲಿಂ ಸಮುದಾಯಕ್ಕೆ ಸಂಬಂಧಿಸಿದ್ದು ಎಂಬುದಕ್ಕಿಂತ ಒಬ್ಬ ಹೆಣ್ಣು ಮಗಳಾದ ಸಮೀರಾಳಿಗೆ ವೈಯಕ್ತಿಕ, ವ್ಯಕ್ತಿಗತ ಸ್ವಾತಂತ್ರ್ಯ ಎಂಬುದು ಇರುವುದಿಲ್ಲ. ಪುರುಷ ಪ್ರಾಧಾನ್ಯ

ಸಮಾಜದಲ್ಲಿ ಹೆಣ್ಣನ್ನು ನೋಡುವ ನೋಟವು ಬದಲಾವಣೆಯಾಗಬೇಕೆಂಬ ಅಂಶವನ್ನು ಈ ಕಥೆಯಲ್ಲಿ ಕಾಣಬಹುದಾಗಿದೆ. ಸಮೀರಾಳ ತಂದೆ ಹೆಣ್ಣು ಎಂದರೆ ಕಾಲಿಗೆ ಹಾಕಿದ ಚಪ್ಪಲಿ ಇದ್ದಂತೆ ಎನ್ನುವುದು ಸ್ತ್ರೀ ಶೋಷಣೆಯ ಅಂಶವನ್ನು ಸೂಚಿಸುತ್ತದೆ. ಒಟ್ಟಾರೆ ಸಮೀರಾ ತನ್ನ ಬದುಕನ್ನು ತಾಯಿಯ ಬಾಣಂತಿ ಹಾಗೂ ಕುಟುಂಬದ ರಕ್ಷಣೆಯಲ್ಲಿ ಮುಕ್ತಾಯಗೊಳಿಸಿಕೊಳ್ಳುವುದೇ ಆಗಿದೆ. ಸಮಾಜದಲ್ಲಿ ಸ್ವತಃ ತಂದೆಯಾದ ಹಸನ್ ಬ್ಯಾರಿಯ ಮಾತುಗಳಿಗೆ ಅಳಿಯನಾದ ಶಬೀರ ಪ್ರತಿ ಉತ್ತರ ಕೊಡುವ ಸಾಮರ್ಥ್ಯವಿದ್ದರೂ ಸುಮ್ಮನೆ ಮೌನದಿಂದಿರುವುದನ್ನು ಕಾಣಬಹುದು. ಇದರಲ್ಲಿ ಸ್ತ್ರೀ ಸಂವೇದನೆಯ ಅಂಶಗಳನ್ನು ಸ್ತ್ರೀ ಪರವಾದಿಯಾಗಿರುವ ಸಾರಾ ಅಬೂಬಕರ್ ನೇರವಾಗಿ ವಿರೋಧಿಸಲು ಸಾಧ್ಯವಾಗದೆ ಕಥೆಯ ಮೂಲಕ ಅಭಿವ್ಯಕ್ತಪಡಿಸಿರುವುದನ್ನು ನಾವು ಕಾಣಬಹುದಾಗಿದೆ.

ನೇಮಿಚಂದ್ರ ಅವರ ಕಥೆಗಳಲ್ಲಿ ಒಂದಾದ "ನನ್ನದಲ್ಲದ ಬದುಕಿಗಾಗಿ" ಎಂಬ ಕಥೆಯಲ್ಲಿ ಸರೂ ತನ್ನ ಗಂಡನಾದ ಅಕ್ಷಯನನ್ನು ಮದುವೆಯಾದ ಎರಡನೇ ತಿಂಗಳಲ್ಲಿಯೇ ಕಳೆದುಕೊಂಡು ದುಃಖತಪ್ತಳಾಗಿ, ಬಳ್ಳಾರಿ ಹುಡುಗ ರಮೇಶನನ್ನು ಮನೆಯವರ ಒತ್ತಾಯದ ಮೇರೆಗೆ ಮದುವೆಯಾಗಲು ಮನಸ್ಸಿಲ್ಲದ ಮನಸ್ಸಿನಿಂದ ಒಪ್ಪಲು ಮುಂದಾಗುವುದನ್ನು ಕಾಣಬಹುದಾಗಿದೆ. ಈ ಕಥೆಯಲ್ಲಿ ಒಬ್ಬ ಹೆಣ್ಣು ಮಗಳು ತನ್ನ ಅಂತರಂಗದ ಪ್ರತಿಕ್ರಿಯೆ ಒಂದು ಮುಖ್ಯ ಸಂವಾದವನ್ನು ಎತ್ತಿ ಹಿಡಿದಿರುವುದನ್ನು ನೋಡಬಹುದಾಗಿದೆ. ಸಮಾಜದಲ್ಲಿ ಕಂಡುಬರುವ ಹಿಂಸೆ, ಕ್ರೌರ್ಯ, ದೌರ್ಜನ್ಯ, ಶೋಷಣೆಯ ವಿವಿಧ ಬಗೆಯ ಸಮಸ್ಯೆಗಳನ್ನು ಅರ್ಥಪೂರ್ಣವಾಗಿ ಸೆರೆಹಿಡಿದಿವೆ ಎಂಬುದನ್ನು ಗುರುತಿಸಬಹುದಾಗಿದೆ.

ಸ್ತ್ರೀ ಸಂವೇದನೆ ಮತ್ತು ಸ್ತ್ರೀ ಮೌಲ್ಯಗಳು ಎಂಬ ವಿಚಾರಧಾರೆಯು ಇಂಗ್ಲೀಷಿನ [Sensitivity] ಅರ್ಥದಲ್ಲಿ ಬಳಕೆಯಾಗಿದೆ. ಕಥೆಗಾರ್ತಿಯು ತಮ್ಮ ಕಥೆಗಳಲ್ಲಿ ಹೆಣ್ಣೊಬ್ಬಳ ಬಗ್ಗೆ ವಿಶಿಷ್ಟವಾಗಿ, ಭಾವನಾತ್ಮಕವಾಗಿ ಅಭಿವ್ಯಕ್ತಪಡಿಸುವ ಬೌದ್ಧಿಕ ಪ್ರತಿಕ್ರಿಯೆ ಆಗಿರುತ್ತದೆ. ಹೀಗಾಗಲೇ ನಾವು ತಿಳಿದುಕೊಂಡಿರುವಂತೆ ಹಿಂದಿನ ಕಾಲದಿಂದಲೂ ಗಂಡು ಹೆಣ್ಣು ಕೂಡಿ ಬಾಳುವುದು. ಸ್ತ್ರೀ ಸಂವೇದನೆ ಎಂದರೆ ಶತ–ಶತಮಾನಗಳಿಂದಲೂ ಅನಾಗರಿಕತೆಯಿಂದ ನಾಗರಿಕತೆಯ ಮೆಟ್ಟಿಲನ್ನು ಏರಿದ ಮನುಷ್ಯರು ತನ್ನದೇ ಆದ ತಿಳುವಳಿಕೆ ಮುಖೇನ ಬೌದ್ಧಿಕವಾಗಿ ಅಭಿವೃದ್ಧಿಯನ್ನು ಹಂತ–ಹಂತವಾಗಿ ತಲುಪಿದ. ಆದರೆ ಓರ್ವ ಹೆಣ್ಣು ಪುರುಷನಿಂದ ಬೇರ್ಪಟ್ಟು, ಅವಳು ಜೀವಿಸಲು ಪ್ರಾರಂಭಿಸಿದಾಗ ಆಕೆಗೆ ಎದುರುಗೊಳ್ಳುವ ಎಲ್ಲಾ ರೀತಿಯ ಸನ್ನಿವೇಶಗಳು ಪುರುಷರ ಅಧೀನವಾದವುಗಳೇ ಆಗಿವೆ. ಇದರಿಂದ ಅವಳಿಗೆ ತನ್ನದೇ ಆದ ವಿಶಿಷ್ಟ ಅನುಭವಗಳು ಉಂಟಾಯಿತು. ಅದನ್ನೇ ನಾವು ಸ್ತ್ರೀ ಸಂವೇದನೆ ಎಂಬುದಾಗಿ ಗ್ರಹಿಸಬಹುದಾಗಿದೆ. ಇಂತಹ ಸ್ತ್ರೀ ನೆಲೆಗಳಿಂದ ರಚಿತವಾಗಿರುವ ಸಾಹಿತ್ಯ ಪುರುಷ ಪ್ರಧಾನವಾದಂತಹ ಮೌಲ್ಯಗಳ ನಿರಾಕರಣೆಯೊಂದಿಗೆ ಸ್ವ–ಅಭಿವ್ಯಕ್ತಿ ಎಂಬುವುದು ಇಲ್ಲಿ ತನ್ನತನವನ್ನು ಹೊಂದುತ್ತದೆ. ಪುರುಷ ಪ್ರಧಾನ ಸಾಮಾಜಿಕವಾಗಿ ಸ್ಥಿತ್ಯಂತರಗೊಳ್ಳುವ ಮೂಲಕ ಸಂಘರ್ಷಗಳು ಉಂಟಾಗುವುದನ್ನು ಕಾಣಬಹುದು.

ಪುರುಷ ಪ್ರಧಾನ್ಯ ಸಮಾಜದಲ್ಲಿ ಸ್ತ್ರೀಯರು ಪುರುಷರು ನಿರ್ಮಿಸಿದ ಎಲ್ಲಾ ಮೌಲ್ಯಗಳನ್ನು ತನ್ನದು ಎಂದು ನಂಬಿ ನಡೆಯುತ್ತಾಳೆ. ಸ್ವಲ್ಪ ಕೂಲಂಕುಷವಾಗಿ ಒಳಹೊಕ್ಕು ನೋಡಿದಾಗ ಕನಿಷ್ಠ ಹಾಗೂ ಶ್ರೇಷ್ಠ ಎಂಬ ವಿಚಾರಗಳ ಅಡಿಯಲ್ಲಿ ತನ್ನ ಜೀವನವನ್ನು ಸಾಗಿಸಿದಳು, ಅಂತಹ ಸಂದರ್ಭದಲ್ಲಿ ಅವಳಿಗೆ ಅವಳ ನಿಜದ ಅನುಭವದ ಅಭಿವ್ಯಕ್ತಿಗೆ ಅವಕಾಶವೆಂಬುದು ಇಲ್ಲದಂತಾಯಿತು. ಪುರುಷ ಸ್ವತಃ ನಿರ್ಮಿಸಿದಂತಹ ವಿಚಾರಗಳಿಗೆ ತಾನು ತಲೆಬಾಗಲೇಬೇಕಾಯಿತು. ಆದರೆ ಪುರುಷರಿಗೆ ಈ ತೆರನಾದ ಯಾವುದೇ ಒತ್ತಡಗಳು ಇಲ್ಲದೆ ತನ್ನದೇ ಆದ ಸ್ವಯಂ ನಿರ್ಧಾರಿತ ಪರಿಸ್ಥಿತಿಗಳ ನಿರ್ಮಾಪಕ ಆಗಿರುವುದನ್ನು ನಾವು ಕಾಣಬಹುದು. ಕಥೆಗಾರ್ತಿಯರ ಕಥೆಗಳಲ್ಲಿ ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಹಾಗೂ ಸಾಂಸ್ಕೃತಿಕವಾಗಿ ಜೊತೆಗೆ ಸಾಹಿತ್ಯಿಕವಾಗಿ ಎಲ್ಲಾ ವಲಯಗಳಲ್ಲಿಯೂ ಪುರುಷ ತನ್ನ ಪ್ರಾಧಾನ್ಯತೆಯನ್ನು ಹೊಂದಿದ್ದಾನೆ.

ಕಥೆಗಾರ್ತಿಯರು ತಮ್ಮ ಕಥೆಗಳಲ್ಲಿ ಹೆಣ್ಣಿನ ಜನನ ಪೂರ್ವ, ಶೈಶವ ಪೂರ್ವ ಬಾಲ್ಯ, ಹದಿಹರೆಯ, ಪ್ರೌಢತ್ವ, ವೃದ್ಧಾಪ್ಯ ಎಲ್ಲಾ ಹಂತಗಳಲ್ಲಿಯೂ ಹೇಗೆ ಸಮಾಜದಲ್ಲಿ ತಮ್ಮ ಬದುಕನ್ನು ಸಾಗಿಸುವ ಮೂಲಕ ಬದುಕಿಗೆ ಪರಿಪೂರ್ಣ ಅರ್ಥವನ್ನು ಕಂಡುಕೊಳ್ಳುವುದು ಹಾಗೂ ಪುರುಷ ಪ್ರಧಾನ್ಯ ಸಮಾಜದಲ್ಲಿ ತನಗೂ ಮಾನ್ಯತೆಯನ್ನು ದೊರಕಿಸಿಕೊಳ್ಳಲು ತನ್ನ ಅಂತರಾಳದ ವಿಚಾರಗಳನ್ನು ಕಥೆಗಳ ಮೂಲಕ ಹೇಳುವ ಪ್ರಯತ್ನದಲ್ಲಿ ತನ್ನನ್ನು ತಾನು ತೊಡಗಿಸಿಕೊಂಡಿರುವುದನ್ನು ನೋಡಬಹುದಾಗಿದೆ. ಕಥೆಗಾರ್ತಿಯರು ಬರೆದಿರುವ ಕಥೆಗಳಲ್ಲಿ ಪಾರಿಭಾಷಿಕವಾಗಿ ಕಥೆಯನ್ನು ಬರೆಯುವವರ ಅನುಭವಗಳಿಗೆ ಭಾವನಾತ್ಮಕ ಹಾಗೂ ಬೌದ್ಧಿಕ ಪಾತಳಿಯ ವ್ಯಕ್ತಿಗಳ ವಿಶಿಷ್ಟವಾದಂತಹ ಪ್ರತಿಕ್ರಿಯೆಯನ್ನೇ ನಾವು ಸ್ತ್ರೀ ಸಂವೇದನೆ ಎಂದು ಕರೆಯಬಹುದಾಗಿದೆ. ಸಂವೇದನೆ ಎನ್ನುವುದು ವ್ಯಕ್ತಿ ವಿಶಿಷ್ಟವಾದುದು ಎನ್ನುವುದನ್ನು ನಾವು ಸ್ವೀಕರಿಸುವುದಾದರೆ, ಸ್ತ್ರೀ ಸಂವೇದನೆ ಎಂದಾಗ ಬರಿಯ ಸ್ತ್ರೀಯರ ಸಂವೇದನೆ ಎನ್ನುವಂತಹ ಅರ್ಥವಷ್ಟೇ ಉಂಟಾಗುವುದಿಲ್ಲ. ಓರ್ವ ಸಾಹಿತಿಯು ತಾನು ಕೂಡ ಹೆಣ್ಣಾಗಿ ಅವಳ ಸ್ವಯಂ ಅನುಭವ ಲೋಕಗಳನ್ನು ಸ್ವಯಂ ಪ್ರವೇಶಿಸುವ ಮೂಲಕ ಬರವಣಿಗೆಯನ್ನು ಅಭಿವ್ಯಕ್ತಪಡಿಸಿದರೆ ಮಾತ್ರವೇ ಸ್ತ್ರೀಸಂವೇದನೆಯು ಪ್ರಕಟವಾದಂತೆ ಆಗುತ್ತದೆ.

ಸಮಾಜದಲ್ಲಿ ಶತ-ಶತಮಾನಗಳಿಂದಲೂ ಕೂಡ ಗಂಡು ಹೆಣ್ಣು ಸೇರಿ ಬದುಕನ್ನು ಸಾಗಿಸುವುದು. ಆದರೆ ಇಲ್ಲಿ ಹೆಣ್ಣಿಗೆ ಅವಳದೇ ಆದ ಭೌತಿಕ, ಮಾನಸಿಕ, ಭಾವುಕ ಪ್ರಪಂಚಗಳ ವಿಚಾರಧಾರೆಗಳು ಉಳಿದುಕೊಂಡವು. ಆದುದರಿಂದ ಮಹಿಳೆಯು ಸಂವೇದನೆಯ ಗ್ರಹಿಕೆಯ ಸ್ವೀಕೃತಿಯ ನೆಲೆಗಳಾದ ಲಯ-ಗತಿ ತೀವ್ರತೆಗಳ ಅಂಶಗಳು ಭಿನ್ನವಾದಂತೆ ಆಯಿತು. ಈ ಭಿನ್ನತೆಯು ಬದುಕನ್ನು ನೋಡುವಂತಹ ಹೆಣ್ಣುಮಗಳ ದೃಷ್ಟಿಕೋನಕ್ಕೂ ಒಂದು ವಿಶಿಷ್ಟತೆಯ ಅಂಶಗಳನ್ನು ಅನುಭವದ ಹಿನ್ನೆಲೆಯಲ್ಲಿ ತಂದುಕೊಡುತ್ತದೆ. ಇಂತಹ ಅನುಭವಗಳ ಅಭಿವ್ಯಕ್ತಿಯೇ ಸ್ತ್ರೀ ಸಂವೇದನೆ ಆಗಿರುತ್ತದೆ. ವಿವಿಧ ಕಥೆಗಾರ್ತಿಯರ ಕಥೆಗಳಲ್ಲಿ ನಾವು ಪ್ರಮುಖವಾಗಿ

ಸ್ತ್ರೀ ಮನೋಧರ್ಮಗಳನ್ನು ವಿಭಿನ್ನವಾದ ದೃಷ್ಟಿಕೋನಗಳಲ್ಲಿ ಸೆರೆಹಿಡಿಯಲಾಗುವುದು. ಸ್ತ್ರೀಯರ ಮೌಲ್ಯಗಳನ್ನು ತಿಳಿಸಿಕೊಡುವುದು, ಸಮಾಜದಲ್ಲಿ ಹೆಣ್ಣಿಗೆ ಸ್ಥಾನಮಾನ, ಆಕೆಯ ತುಡಿತಗಳನ್ನು, ಜೊತೆಗೆ ದುಃಖ ಮತ್ತು ಸಂತೋಷಗಳನ್ನು ಹೀಗೆ ವಿವಿಧ ಸ್ತರಗಳು ಆಕೆಯ ಭಾವನೆಗಳಿಗೆ ಸಂಬಂಧಿಸಿದಂತೆ ಸ್ತ್ರೀ ಸಂವೇದನೆಗಳನ್ನು ವಿಭಿನ್ನ ಸ್ವರೂಪಗಳಲ್ಲಿ ಕಾಣಬಹುದು. ಸಮಾಜದಲ್ಲಿ ಮಹಿಳೆಯರಿಗೆ ಇರುವ ಸ್ಥಾನಮಾನಗಳನ್ನು ಕೂಲಂಕುಷವಾಗಿ ಗಮನಿಸಿದಾಗ ಮಾತ್ರ ಸ್ತ್ರೀ ಸಂವೇದನೆಯ ಸ್ವರೂಪಗಳ ಒಳತಿರುವನ್ನು ತಿಳಿಯಬಹುದಾಗಿದೆ. ಹಿಂದಿನ ಕಾಲದಿಂದಲೂ ಸ್ತ್ರೀಯು ತನ್ನದೇ ಸ್ಥಾನವನ್ನು ಭದ್ರಪಡಿಸಿಕೊಳ್ಳುವ ಸಲುವಾಗಿ ಪ್ರಯತ್ನಿಸಿರುತ್ತಾಳೆ. ಪ್ರಾಚೀನ ಸಾಹಿತ್ಯದಲ್ಲಿ ಒಂದಲ್ಲಾ ಒಂದು ರೀತಿ ಹೆಣ್ಣು ಶೋಷಣೆಗೆ ಒಳಗಾಗುವ ಅಂಶಗಳನ್ನು ನಾವು ಕಾಣುತ್ತಿದ್ದೇವೆ.

ಪ್ರಾಚೀನ ಕಾಲಘಟ್ಟದಿಂದಲೂ ಹೆಣ್ಣು ನಡೆದು ಬಂದಂತಹ ಹಾದಿಯನ್ನು ಗಮನಿಸಿದಾಗ, ವೇದಕಾಲೀನ ಮಹಿಳೆಯರ ಸ್ಥಾನಮಾನಗಳು ಸ್ವಲ್ಪ ಉನ್ನತ ಮಟ್ಟದಲ್ಲಿಯೇ ಇತ್ತು ಎಂದು ಹೇಳಬಹುದು. ಆದರೆ ಪುರಾಣದ ಕಾಲದಲ್ಲಿ ಹಾಗೂ ಇತಿಹಾಸದ ಕಾಲಗಳಲ್ಲಿ ಮಹಿಳೆಯರು ಆಲಕ್ಷಿಸಲ್ಪಟ್ಟವರು. ಮಹಾಕಾವ್ಯಗಳ ಕಾಲಗಳಲ್ಲಿ ಅಂತೂ ಮಹಿಳೆಯರ ಸ್ಥಿತಿಯೂ ಹೀನವಾಗಿತ್ತು ಎಂದರೂ ತಪ್ಪಾಗಲಾರದು. ಆದರೆ ಜೈನ ಧರ್ಮ ಹಾಗೂ ಬೌದ್ಧ ಧರ್ಮಗಳ ಕಾಲದಲ್ಲಿ ದೀನಸ್ಥಿತಿಯಿಂದ ಸ್ವಲ್ಪ ಸುಧಾರಿಸಿಕೊಂಡಳು ಎಂಬುದು ತಿಳಿದುಬರುತ್ತದೆ. ಆದರೆ ಪುರುಷ ಪ್ರಧಾನ್ಯ ಸಮಾಜದ ಹಿನ್ನೆಲೆಯಲ್ಲಿ ಸ್ತ್ರೀ–ಪುರುಷರೆಂಬ ತಾರತಮ್ಯವನ್ನು ಹೆಚ್ಚಿಸಿ ಅದರಲ್ಲಿ ಹೆಣ್ಣನ್ನು ಕೇವಲ ಭೋಗವಸ್ತುವಾಗಿ ಗುರುತಿಸಲಾಯಿತು. ಅವಳ ಯಾವುದೇ ಭಾವನೆಗಳಿಗೆ ಒತ್ತು ಕೊಟ್ಟಿಲ್ಲ. ಆದರೆ ಆಧುನಿಕ ಸಾಹಿತ್ಯದ ಪ್ರಾರಂಭದಲ್ಲಿ ಸಾಂಪ್ರದಾಯಿಕವಾದ ಚೌಕಟ್ಟಿನ ಅಡಿಯಲ್ಲಿ ಹೆಣ್ಣನ್ನು ಚಿತ್ರಿಸುತ್ತಾ ಬಂದರೂ, ನಂತರದ ಸಾಹಿತ್ಯದಲ್ಲಿ ಮಹಿಳೆಯರನ್ನು ದಿಟ್ಟ ಸಾಮರ್ಥ್ಯವುಳ್ಳ ಪಾತ್ರಗಳಾಗಿ ಗುರುತಿಸಲಾಯಿತು.

ನವೋದಯ ಪೂರ್ವ ಕಾಲಘಟ್ಟದಲ್ಲಿ ಸ್ತ್ರೀಯರು ಬರವಣಿಗೆಯಲ್ಲಿ ತೊಡಗಿದ್ದರು. ಅದರಲ್ಲಿ ಪ್ರಮುಖವಾಗಿ ಸ್ತ್ರೀಯರ ಶಿಕ್ಷಣ, ಸ್ತ್ರೀಯರ ವಿದ್ಯಾಭ್ಯಾಸ, ಈ ವಿಚಾರಗಳಿಗೆ ಹೆಚ್ಚಿನ ಆದ್ಯತೆಯನ್ನು ನೀಡಿದ್ದರು. ಸಾಂಪ್ರದಾಯಿಕತೆಯ ಹಿನ್ನೆಲೆಯಲ್ಲಿ ಮಹಿಳೆಯರ ಚಿತ್ರಣವೆಂಬುದು ಇದ್ದರೂ ಅದನ್ನು ವಿರೋಧಿಸುವ ರೀತಿಯಲ್ಲಿ ಬರೆದಿರುವುದನ್ನು ಕಾಣಬಹುದು. ತದನಂತರ ಕಾಲಘಟ್ಟದಲ್ಲಿ ಸ್ತ್ರೀಯರ ಪರವಾಗಿ ಅವಳ ಸಂವೇದನೆಗಳಿಗೆ ಸ್ಪಂದಿಸುವಂತಹ ಹಾಗೂ ಸ್ತ್ರೀಪರವಾಗಿ ಲೇಖಕಿಯರು ಪುರುಷರಿಗೆ ಹೇಗೆ ಪ್ರಾಧಾನ್ಯತೆ ಇದೆಯೋ ಹಾಗೆ ನಮಗೂ ಸಮಾನತೆ ಎಂಬುದು ಅವಶ್ಯಕ ಎಂಬುದನ್ನು ತಿಳಿಸಲು ಪ್ರಯತ್ನಿಸಿದರು.

ಮಹಿಳೆಯರು ಮತ್ತು ಪುರುಷರು ಎಂಬುದಾಗಿ ವಿಶಿಷ್ಟ ಸಂವೇದನೆಗಳನ್ನು ವಿಭಾಗಿಸಿದಾಗ, ಎಲ್ಲಾ ಸ್ತ್ರೀಯ ತತ್ವಕ್ಕೆ ವಿಶಿಷ್ಟ ಸಂವೇದನೆಗಳು ಇರಬೇಕು ಎಂಬುದಾಗಿ

ಇಲ್ಲ. ಅದಕ್ಕೆ ಮೂಲ ಕಾರಣವೆಂದರೆ ಪುರುಷ ಕೇಂದ್ರದ ಸಮಾಜದಲ್ಲಿ ಬೆಳೆದು ಮಹಿಳೆಯು ಅದಕ್ಕೆ ಅನುಗುಣವಾಗಿ ಸಂವೇದನೆಗಳನ್ನು ಬೆಳೆಸಿಕೊಳ್ಳುತ್ತಾರೆ. ಕತೆಗಾರ್ತಿಯರು ನಮ್ಮ ಮಹಿಳಾ ಸಾಹಿತಿಗಳು ಸ್ತ್ರೀ ಸಂವೇದನೆಗೆ ಸ್ಪಂದಿಸುವ ಅಂಶಗಳನ್ನು ನಾವು ಕೂಲಂಕುಷವಾಗಿ ಗಮನಿಸಿದಾಗ ನಮಗೆ ಕೆಲವೊಂದು ಸತ್ಯ ಸಂಗತಿಗಳು ತಿಳಿದುಬರುತ್ತದೆ. ಸಮಾಜದಲ್ಲಿ ಸಮಾನತೆಯನ್ನು ಕಂಡುಕೊಳ್ಳುವುದು ಒಂದಾಗಿದೆ. ಸಾಮಾಜಿಕವಾಗಿ ಆಗಿರಬಹುದು ಅಥವಾ ಸಾಹಿತ್ಯಕವಾಗಿ ಆಗಿರಬಹುದು ಒಟ್ಟಿನಲ್ಲಿ ತಿಳಿದುಬರುವುದೆನೆಂದರೆ, ಸಾಂಸ್ಕೃತಿಕವಾಗಿ ನಮ್ಮ ದೇಶದಲ್ಲಿ ಒಳಗೊಂಡಿರುವಂತಹ ಮಹಿಳೆಯರು ಅಭಿವ್ಯಕ್ತಿಯ ಅನುಕೂಲ ಹಾಗೂ ಅವಕಾಶಗಳಿಂದ ವಂಚಿತರಾಗಿರುತ್ತಾರೆ ಎಂಬುದು ಎಲ್ಲರಿಗೂ ತಿಳಿದಿರುವಂತಹ ಸತ್ಯ ಸಂಗತಿ ಆಗಿರುತ್ತದೆ. ಆದರೆ ಮಹಿಳೆಯು ಇದುವರೆಗೂ ತಾನು ನಂಬಿಕೊಂಡು ಬಂದಿರುವಂತಹ ಕೆಲವೊಂದು ವ್ಯವಸ್ಥೆಗಳನ್ನು ಹಾಗೂ ಪುರುಷಪ್ರಧಾನ್ಯ ವ್ಯವಸ್ಥೆಯ ನಂಬಿಕೆಗಳನ್ನು ಸ್ವೀಕರಿಸುವಲ್ಲಿ ತನ್ನ ಸ್ವಂತಿಕೆಯನ್ನು ಬಳಸುತ್ತಿದ್ದಾಳೆ. ಹಾಗೆಯೇ ತನಗೆ ಸರಿಯಿಲ್ಲದಂತಹ ವ್ಯವಸ್ಥೆಯನ್ನು ತಿರಸ್ಕರಿಸುವಂತಹ ಅಥವಾ ಪ್ರತಿಭಟಿಸುವಂತಹ ಒಂದು ಕಾರ್ಯವನ್ನು ಕೂಡ ಕೈಗೆತ್ತಿಕೊಂಡಿರುತ್ತಾಳೆ. ಸಮಾಜದಲ್ಲಿ ಸ್ತ್ರೀ ವಾದವು ಕನ್ನಡ ಸಾಹಿತ್ಯದಲ್ಲಿ ಗಟ್ಟಿಗೊಳ್ಳುತ್ತಿದೆ ಎಂಬುದು ಒಂದು ಅಂಶವಾಗಿ ಕಂಡು ಬಂದಿದೆ.

**ಅಧ್ಯಯನದ ಫಲಿತಗಳು**

ಸ್ತ್ರೀವಾದಿಗಳ ವಿಚಾರಧಾರೆಗಳಲ್ಲಿ ಕೆಲವು ಕಥೆಗಾರ್ತಿಯರು ತಮ್ಮ ಕಥೆಗಳಲ್ಲಿ ತಮಗೆ ದೊರೆತಿರುವ ಬದುಕಿನಲ್ಲಿ ಸ್ವಾತಂತ್ರ್ಯ ಎಂಬುದು ದೊರೆಯದೇ ಶೋಷಣೆಗೆ ಒಳಗಾದರೂ, ತನ್ನ ಪಾತಿವ್ರತೆಯ ವಿಷಯದಲ್ಲಿ ಎಲ್ಲವನ್ನೂ ಮೌನವಾಗಿ ಒಪ್ಪಿಕೊಂಡು ಸಾಗುವುದನ್ನು, ಸಾಮಾಜಿಕ ಪರಿಸರಕ್ಕೆ ತನ್ನನ್ನು ಒಗ್ಗಿಸಿಕೊಳ್ಳುವ ಮನೋಪ್ರವೃತ್ತಿಯು ಕಂಡು ಬಂದರೆ, ಇನ್ನು ಕೆಲವು ಹೆಣ್ಣು ಮಕ್ಕಳು ಸ್ವಾತಂತ್ರ್ಯ ಅಥವಾ ತಾನು ಇಷ್ಟಪಟ್ಟಂತಹ ಬಾಳ್ವೆ ಅಥವಾ ಬದುಕು ತನಗೆ ದೊರೆಯದೆ ಇದ್ದಾಗ ಅದನ್ನು ನೇರವಾಗಿ ಖಂಡಿಸುತ್ತಾ ತನ್ನ ಇಚ್ಛೆಯಂತೆ ಬಾಳ್ವೆಯನ್ನು ನಡೆಸುವ ಪ್ರಯತ್ನವನ್ನು ಕಾಣಬಹುದು.

ಒಟ್ಟಾರೆಯಾಗಿ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಪ್ರಮುಖವಾಗಿ ಮಹಿಳಾ ಸಂವೇದನೆಯು ವಿಭಿನ್ನವಾದ ನೆಲೆಗಟ್ಟುಗಳನ್ನು ಶೋಧನೆ ಮಾಡಲು ಹೊಸದಾರಿಯನ್ನು ಮಾಡಿಕೊಟ್ಟಿದೆ. ಸಮಾಜದಲ್ಲಿನ ಮಹಿಳೆಯ ಸ್ಥಾನಮಾನ, ಕೌಟುಂಬಿಕ ಸಾಮಾಜಿಕ ವಲಯದಲ್ಲಿನ ಮಹಿಳೆಯರ ತುಳಿತಗಳು ಹಾಗೂ ತಲ್ಲಣಗಳು ಜೊತೆಗೆ ಅಲಕ್ಷಿತ ಜನಾಂಗಗಳು ಮಹಿಳೆಯರ ಮೇಲಾಗುವ ಶೋಷಣೆಗಳ ವಾಸ್ತವತೆಯನ್ನು, ಮಹಿಳೆಯರ ಪ್ರತಿನಿತ್ಯ ಬದುಕಿನ ಸಮಸ್ಯೆಗಳ ಸಂಪೂರ್ಣ ಚಿತ್ರಣ, ಇವುಗಳೆಲ್ಲದರ ವಿರುದ್ಧದ ಪ್ರತಿಭಟನೆ, ಮಹಿಳಾ ಸಮಾನತೆಯ ಕೂಗು, ಅವಳ ಅಸ್ತಿತ್ವದ ಪ್ರಶ್ನೆಗಳು, ಮಹಿಳಾ ಸ್ಥಾನಮಾನಗಳಲ್ಲಿ ಉನ್ನತಿಯ ಅಭಿಲಾಷೆ ಮುಂತಾದ ವಿಷಯಗಳಿಗೆ ಸಂಬಂಧಿಸಿದ ಹಾಗೆ ಕಥೆಗಳ ರಚನೆಯ

ಹಿನ್ನೆಲೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವ ಮೂಲಕ ಮಹಿಳೆಯರ ಸರ್ವತೋಮುಖ ಏಳಿಗೆಗೆ ಶ್ರಮಿಸುತ್ತಿರುವುದನ್ನು, ಸಮಾಜದಲ್ಲಿ ಹೊಸದಾದ ಬದಲಾವಣೆಗಳನ್ನು ಕಾಣುವ ತವಕದಲ್ಲಿರುವುದನ್ನು ನಾವು ಇಲ್ಲಿ ಕಾಣಬಹುದಾಗಿದೆ.

**ಪರಾಮರ್ಶನ ಗ್ರಂಥಗಳು:**


1. ಅಮರೇಶ ನುಗಡೋಣಿ, (2008), ಕನ್ನಡ ಸಂಶೋಧನೆಯ ವೈಧಾನಿಕತೆಗಳು, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
2. ಉಷಾ ಎಂ., (2004), ಮಹಿಳಾ ಚಳುವಳಿ ಮತ್ತು ಮಹಿಳಾ ವಿಷಯಗಳು, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
3. ತೇಜಸ್ವಿನಿ ನಿರಂಜನ ಮತ್ತು ಸೀಮಂತಿನಿ ನಿರಂಜನ (ಸಂ), (1994), ಸ್ತ್ರೀವಾದಿ ಸಾಹಿತ್ಯ, ಬೆಂಗಳೂರು: ಕನ್ನಡ ಸಂಘ (ಕ್ರೈಸ್ಟ್ ಕಾಲೇಜು).
4. ಬಾನು ಮುಷ್ತಾಕ್, (2012), ಬಡವರ ಮಗಳು ಹೆಣ್ಣಲ್ಲ, ಮೈಸೂರು: ಅಭಿರುಚಿ ಪ್ರಕಾಶನ.
5. ವೈದೇಹಿ, (2008), ಸರಸ್ವತಿ ಬಾಯಿ ರಾಜವಾಡೆ: ಬದುಕು–ಬರಹ, ಹೆಗ್ಗೋಡು: ಅಕ್ಷರ ಪ್ರಕಾಶನ.
6. ಸಾರಾ ಅಬೂಬಕ್ಕರ್, (1991), ಮುಸ್ಲಿಂ ಸಂವೇದನೆ ಮತ್ತು ನಾನು (ಲೇಖನ), ಧಾರವಾಡ: ಸಂಕ್ರಮಣ ಪತ್ರಿಕೆ (ಸಂಕ್ರಮಣ ಪ್ರಕಾಶನ).